ನಂತರ ನನ್ನ ಮಗಳಿಗೂ ಕತೆಯ ಹುಚ್ಚು. ಅವಳಿಗೆ ರಾಶಿ ರಾಶಿ ಕತೆ ಹೇಳಿದ್ದೇನೆ. ಅವೆಲ್ಲ ಓದಿದ, ಕೇಳಿದ ಕತೆಗಳೇ ಆಗಬೇಕಿರಲಿಲ್ಲ. ಬಹಳಷ್ಟು ಕತೆಗಳಲ್ಲಿ ಮೇಘಾ ಪುಟ್ಟಿಯದೇ ಮುಖ್ಯ ಪಾತ್ರ.

◆ **ವೈಮಾನಿಕ ಕ್ಷೇತ್ರದಲ್ಲಿಯ ವೃತ್ತಿ, ನಿಮ್ಮ ಸೃಜನಾತ್ಮಕ ಕೃತಿಗಳಲ್ಲಿ ಯಾವ ರೀತಿಯ ಪ್ರಭಾವ ಬೀರಿದೆ?**

ನನ್ನ ವೈಮಾನಿಕ ಕ್ಷೇತ್ರ ನನಗೆ ವಿಸ್ತಾರದ ಅನುಭವಗಳನ್ನು ತಂದುಕೊಟ್ಟಿತು. ನನ್ನ ಕೆಲಸದಿಂದ ನಾನು ಕೇವಲ ಸಂಬಳ ಮಾತ್ರ ಪಡೆಯಲಿಲ್ಲ, ಆತ್ಮವಿಶ್ವಾಸವನ್ನು, ಬದುಕಿನ ಅಪರೂಪದ ಅವಕಾಶಗಳನ್ನು ಪಡೆದೆ. ಸಮಸ್ಯೆಗಳನ್ನು ಎದುರಿಸುವ, ಪರಿಹರಿಸುವ ನೂರು ಬಗೆಯನ್ನು ಕಲಿತೆ. ಇವೆಲ್ಲವೂ ನನ್ನ ಕೃತಿಗಳ ಮೇಲೆ ಪ್ರಭಾವ ಬೀರಿವೆ.

1985ರಲ್ಲಿ 'ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್'ಗೆ ಸೇರಿದಾಗ, ಆಗಷ್ಟೆ ದೇಶೀಯ ವಿನ್ಯಾಸದ ಭಾರತದ ಮೊಟ್ಟ ಮೊದಲ ಮಿಲಿಟರಿ ಹೆಲಿಕಾಪ್ಟರ್ 'ಅಡ್ವಾನ್ಸ್ಡ್ ಲೈಟ್ ಹೆಲಿಕಾಪ್ಟರ್' (ಎಎಲ್‌ಎಚ್) ಪ್ರಾಜೆಕ್ಟ್ ಆರಂಭವಾಗಿತ್ತು. 'ಎಎಲ್‌ಎಚ್', ಅತ್ಯಾಧುನಿಕ ಹಗುರ ಹೆಲಿಕಾಪ್ಟರ್. ಈ ಹೆಲಿಕಾಪ್ಟರ್‌ನ ಸಂಶೋಧನೆ ಮತ್ತು ವಿನ್ಯಾಸದೊಡನೆಯೇ ನಾನು ಬೆಳೆದೆ.

ಬದುಕಿನ ಯಾವುದೇ ಸಮಸ್ಯೆಯನ್ನು ಕೋಡು ಹಿಡಿದು ಎದುರಿಸುವುದನ್ನು ನನ್ನ ವೃತ್ತಿ ಕಲಿಸಿತ್ತು. 'ಬದುಕಿನ ಯಾವುದೂ ಸಮಸ್ಯೆಯಲ್ಲ, ಕೇವಲ ಸವಾಲು. ಯಾವುದೂ ಸೋಲಲ್ಲ, ಎಲ್ಲವೂ ಬದುಕು ಕಲಿಸುವ ಪಾಠಗಳು' ಎಂಬ ನನ್ನ ಮಂತ್ರ ನನ್ನೆಲ್ಲ ಕತೆಗಳ, ಇತರ ಬರಹಗಳ ಬೆನ್ನೆಲುಬಾಗಿದ್ದರೆ ಅದಕ್ಕೆ ನನ್ನ ವೃತ್ತಿ ಜೀವನದ ಅನುಭವಗಳು ಕಾರಣ. ಬದುಕಿನ ಸಮಸ್ಯೆಗಳು 'ಜಸ್ಟ್ ಎ ಸ್ನಾಗ್ ಆನ್ ದಿ ಹೆಲಿಕಾಪ್ಟರ್. ವಿ ವಿಲ್ ಫಿಗರ್ ಇಟ್ ಔಟ್' ಎಂಬ ದೃಷ್ಟಿಕೋನವನ್ನು, ಆತ್ಮವಿಶ್ವಾಸವನ್ನು ಕೊಟ್ಟಿದ್ದು ನನ್ನ ವೃತ್ತಿ. ಇಂದು ಭೂಸೇನೆ, ವಾಯುಪಡೆ, ನೌಕಾಪಡೆ, ತಟರಕ್ಷಕ ದಳ ಎಲ್ಲದರಲ್ಲಿಯೂ ನಮ್ಮ ಈ ದೇಶೀಯ ವಿನ್ಯಾಸದ 260ಕ್ಕೂ ಹೆಚ್ಚು 'ಧ್ರುವ' ಹೆಲಿಕಾಪ್ಟರುಗಳು ಹಾರುತ್ತಿವೆ ಎನ್ನುವುದೇ ಹೆಮ್ಮೆಯ ವಿಷಯ. ಮಿಲಿಟರಿ ಹೆಲಿಕಾಪ್ಟರ್ ಅನ್ನು ಸಿವಿಲ್ ಹೆಲಿಕಾಪ್ಟರ್ ಆಗಿಯೂ ಸರ್ಟಿಫೈ ಮಾಡಿದ್ದೆವು. 2013ರಲ್ಲಿ ಉತ್ತರಾಖಂಡದ ಪ್ರವಾಹ ಪರಿಸ್ಥಿತಿಯಲ್ಲಿ ಸಹಾಯಕ್ಕೆ ಧಾವಿಸಿದ ಹೆಲಿಕಾಪ್ಟರ್ ನಮ್ಮದು. ಬಹುಪಾತ್ರಧಾರಿಯಾದ ನಮ್ಮ ದೇಶೀಯ ಹೆಲಿಕಾಪ್ಟರ್‌ನಿಂದ ನಾನು ಕಲಿತದ್ದು ಅಗಾಧವಿದೆ.

ವೃತ್ತಿ ಜೀವನದ ಕೆಲವು ಅನುಭವಗಳು ನೇರವಾಗಿ ಕತೆಯಾಗಿರುವ ಸಂದರ್ಭಗಳೂ ಉಂಟು. ಒಂದು ಹೆಲಿಕಾಪ್ಟರ್, ಡ್ರಾಯಿಂಗ್ ಬೋರ್ಡಿನ ಗೀಟು, ಗೆರೆಗಳಿಂದ ಹೊರಬಿದ್ದು, ಮೈದುಂಬಿ ರೂಪು ಪಡೆದು, ಮೆಲ್ಲನೆ ಮೇಲೆದ್ದು ನೆಲ ಬಿಟ್ಟು ಮುಗಿಲಿಗೆ ಹಾರುವ ಅದ್ಭುತ ಅನುಭವ ನನ್ನ ಈ ರಂಗದಲ್ಲಿ ದೊರೆಯಿತು. ದಶಕಗಳ ಹಿಂದೆ ನಮ್ಮ ಮೊಟ್ಟ ಮೊದಲ ಪ್ರೋಟೋಟೈಪ್ ಹೆಲಿಕಾಪ್ಟರ್ ನೆಲದಿಂದ ಮೇಲೆದ್ದ ಕ್ಷಣ ನಾವೆಲ್ಲ ಕಾತುರದಿಂದ ಕಾದದ್ದು ನಿನ್ನೆ ನಡೆದಂತೆ ನೆನಪಿದೆ. ಇದೇ ಹೆಲಿಕಾಪ್ಟರ್, ಲಡಾಕಿನ 'ಲೇ'ನಲ್ಲಿ ಮೈನಸ್ 40 ಡಿಗ್ರಿ ಕೊರೆವ ಚಳಿಯಲ್ಲಿ ಪರೀಕ್ಷಣಾ ಹಾರಾಟಕ್ಕೆ ಹೋದಾಗ, ತಣ್ಣನೆಯ ಕಣಿವೆಯಲ್ಲಿ ಬೋಡುಬೆಟ್ಟಗಳ ನಡುವೆ ಹಾರಿದಾಗ ಅದನ್ನು ಅಭಿಮಾನದಿಂದ ನೋಡಿದ್ದೇನೆ.ಕೊರೆವ ಚಳಿಯ ಲಡಾಕಿನ ಅನುಭವ ಇದೇ "ಮಯೂರ"ದಲ್ಲಿ 'ತಣ್ಣನೆಯ ಕಣಿವೆಯಲಿ ಒಂದು ಪ್ರೀತಿಯ ಕನಸು' ಕತೆಯಾಗಿ ಪ್ರಕಟವಾಯಿತು.

◆ **ಪೂರ್ವ ಸಿದ್ಧತೆ, ಅಧ್ಯಯನ, ಪ್ರವಾಸಗಳ ಮೂಲಕ ಮಾಹಿತಿ ಸಂಗ್ರಹ – ಇವು ನಿಮ್ಮ ಕೃತಿಗಳಲ್ಲಿ ಎದ್ದು ಕಾಣಿಸುತ್ತವೆ. ಬರಹಗಳಿಗೆ ಬೇಕಾದ ಮಾಹಿತಿ ಅರಸಿ ಹಲವು ದೇಶಗಳಲ್ಲಿ**

